# ಶ್ರೀ ರಾಘವೇಂದ್ರ ತಂತ್ರ

ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಎಂ.ಎ., ಮೈಸೂರು

-Contributed by Sri Ramanatha B,Bangalore www.vijayadasaru.net Team member

ಸಂಸಾರದಲ್ಲಿ ಎಲ್ಲಾ ಜೀವರು ದುಃಖದಿಂದ ಬಳಲುತ್ತಾರೆ. ಸಜ್ಜನರು ದುಃಖದಿಂದ ಬಳಲುವುದನ್ನು ನೋಡಿ ಮಹಾತ್ಮರು ಅವರಲ್ಲಿ ದಯೆ ತೋರಿಸುತ್ತಾರೆ. ಮಹಾತ್ಮರ ದರ್ಶನ, ಸಂಭಾಷಣೆ ಮತ್ತು ಸೇವೆಗಳಿಂದ ದುಃಖಗಳು ನಾಶವಾಗುತ್ತವೆ. ಅಷ್ಟೇ ಅಲ್ಲ ಈ ಲೋಕದ ಮತ್ತು ಪರಲೋಕದ ಸಂಪತ್ತಾಗಲೀ ಅಥವಾ ಮೋಕ್ಷಸಾಧನವಾದ ಜ್ಞಾನಭಕ್ತಿ ವೈರಾಗ್ಯಗಳ ಸಂಪತ್ತಾಗಲೀ ದೊಡ್ಡವರ ಅನುಗ್ರಹದಿಂದಲೇ ಉಂಟಾಗುತ್ತವೆ. ಮಹಾತ್ಮರ ಅವಕೃಪೆಗೆ ಪಾತ್ರರಾದರೆ ಸರ್ವನಾಶವಾಗುತ್ತದೆ. ಇದಕ್ಕೆ ನಾವು ಕೇಳುವ ಪುರಾಣ ಕಥೆಗಳೇ ನಿದರ್ಶನ. ಆದ್ದರಿಂದಲೇ ವೇದದಲ್ಲಿಯೇ

**"ತಸ್ಮಾದಾತ್ಮಜ್ಞಂ ಹ್ಯರ್ಚಯೇದ್ ಭೂತಿಕಾಮಃ"**

"ಆದ್ದರಿಂದ ಯಾವುದೇ ವಿಧವಾದ ಸಂಪತ್ತನ್ನು ಬಯಸುವವರು ಅಪರೋಕ್ಷ ಜ್ಞಾನಿಗಳನ್ನು ಆರಾಧಿಸಬೇಕು" ಎಂದು ಹೇಳಿದೆ.

ಕಪಿಲ ನಾಮಕ ಪರಮಾತ್ಮನು ತಾಯಿಯಾದ ದೇವಹೂತಿಗೆ ಸಂಸಾರವನ್ನು ದಾಟುವ ಉಪಾಯವನ್ನು ಉಪದೇಶಿಸುತ್ತಾ

**"ಆತ್ಮ ವಿಚ್ಚರಣಾರ್ಚನಂ"**

"ಅಪರೋಕ್ಷ ಜ್ಞಾನಿಗಳ ಪಾದಸೇವೆ" ಒಂದು ಮುಖ್ಯವಾದ ಉಪಾಯವೆಂದು ಹೇಳಿದ್ದಾನೆ.

ಯದ್ಯಪಿ ನಾವು ತಂದೆ ತಾಯಿಗಳ ಮತ್ತು ಗುರುಹಿರಿಯರ ಸೇವೆಯನ್ನು ಮಾಡುತ್ತೇವೆ. ಅದನ್ನು ಎಲ್ಲರೂ ಮಾಡಲೇಬೇಕು. ಆ ಸೇವೆಯು ಆ ಅಧಿಷ್ಠಾನದಲ್ಲಿರುವ

ಅಂತರ್ಯಾಮಿಯಾದ ದೇವರ ಸೇವೆ. ಆದರೆ ನಮಗೆ ದೊರಕುವ ಆ ವ್ಯಕ್ತಿಗಳು ಯಾರೂ ಅಪರೋಕ್ಷ ಜ್ಞಾನಿಗಳಲ್ಲ. ನಮಗೆ ಒಳ್ಳೆಯದಾಗಲೆಂದು ಅವರು ಹರಸಿದರೂ ಒಳ್ಳೆಯದನ್ನು ಮಾಡುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಕೆಲವು ಸಲ ಅವರು ಹರಸಿದ್ದರೂ ನಮ್ಮ ಪ್ರಬಲವಾದ ದುಷ್ಕರ್ಮದಿಂದ ನಮಗೆ ಕೆಟ್ಟದ್ದೇ ಆಗುವುದು ನಮಗೆ ಕಂಡು ಬರುತ್ತದೆ. ಆದರೆ ಅಪರೋಕ್ಷಜ್ಞಾನಿಗಳ ಅಧಿಷ್ಠಾನದಲ್ಲಿ ಮಾಡಿದ ದೇವರ ಸೇವೆ ಹಾಗಲ್ಲ. ಜ್ಞಾನಿಗಳು ಸತ್ಯವಾಕ್ಯನಾದ ಮತ್ತು ಸತ್ಯಸಂಕಲ್ಪನಾದ ಶ್ರೀಹರಿಯನ್ನು ನೋಡಿ ಅವನ ಅನುಗ್ರಹದಿಂದ ತಾವೂ ಸತ್ಯಸಂಕಲ್ಪರೂ ಆಗಿರುತ್ತಾರೆ. ಆದ್ದರಿಂದ ನಾವು ಅವರ ಸೇವೆ ಮಾಡಿ ಅವರ ಮನಸ್ಸಿನಲ್ಲಿ ನಮ್ಮ ಮೇಲೆ ಒಳ್ಳೆಯ ಭಾವನೆ ಬಂದರೆ ಅಥವಾ ಅವರು ಸ್ಪಷ್ಟವಾಗಿ ಒಳ್ಳೆಯದಾಗಲಿ ಎಂದು ಹಾರೈಸಿದರೆ ಅದು ಎಂದೂ ಸುಳ್ಳಾಗುವುದಿಲ್ಲ. ಆದ್ದರಿಂದ ಅಪರೋಕ್ಷಜ್ಞಾನಿಗಳ ಅಧಿಷ್ಠಾನದಲ್ಲಿ ದೇವರ ಸೇವೆಯು ಅತ್ಯಂತ ಅವಶ್ಯಕ. ಆದರೆ ನೇರವಾಗಿ ಅಪರೋಕ್ಷ ಜ್ಞಾನಿಗಳನ್ನೇ ಚಿಂತಿಸುವುದು ಅಷ್ಟು ಒಳ್ಳೆಯದಲ್ಲ. ನಮಗೆ ಮಂತ್ರೋಪದೇಶ ಮಾಡಿದ ವಿದ್ಯೋಪದೇಶ ಮಾಡಿದ ಗುರುಗಳನ್ನು ಚಿಂತಿಸಿ ಅವರಲ್ಲಿ ಅಪರೋಕ್ಷ ಜ್ಞಾನಿಗಳನ್ನು ಚಿಂತಿಸಿ ಅವರಲ್ಲಿ ಅಂತರ್ಯಾಮಿಗಳಾದ ಭಾರತೀರಮಣ ಮುಖ್ಯಪ್ರಾಣನನ್ನೂ ಅವರ ಅಂತರ್ಯಾಮಿಗಳಾದ ಲಕ್ಷ್ಮೀನಾರಾಯಣರನ್ನೂ ಚಿಂತಿಸೆ ಸೇವೆ ಮಾಡಬೇಕು. ಮಂತ್ರೋಪದೇಶಾದಿಗಳಿಲ್ಲದವರೂ ತಮಗೆ ಪೂಜ್ಯರಾದ ತಂದೆ, ತಾಯಿ ಮೊದಲಾದವರ ಅಧಿಷ್ಠಾನದಲ್ಲಿ ಅಪರೋಕ್ಷ ಜ್ಞಾನಿಗಳಿಂದ ಹಿಡಿದು ದೇವರ ವರೆಗೂ ಚಿಂತಿಸಿ ಅವರ ಸೇವೆಯನ್ನು ಮಾಡಬೇಕು.

ಸೇವೆ ಎಂದರೇನು ಎಂಬ ಪ್ರಶ್ನೆಗೆ ಉತ್ತರವಾಗಿ ಶ್ರೀವಿಷ್ಣುತೀರ್ಥರು ತಮ್ಮ ಗ್ರಂಥದಲ್ಲಿ

**"ಯೇನ ಕೇನ ಮಿಷೇಣ ಸಂತತಮಾದರೇಣ ಮನೋರತಿಃ ।**
**ಶ್ರೀಹರೇಶ್ಚರಣಾಬ್ಜಯೋರಿದಮೇವ ಸಾಧನಮೀರಿತಮ್ ॥"**

ಯಾವುದಾದರೂ ನೆಪದಿಂದ ಸತತವಾಗಿ ಹರಿಗುರುಗಳ ಪಾದವನ್ನು ಪ್ರೀತಿಯಿಂದ ಮನಸ್ಸಿನಲ್ಲಿ ಸಂತತವಾಗಿ ಸ್ಮರಿಸುವುದೇ ಸೇವೆ ಅಥವಾ ಸಾಧನೆ ಎಂದು ಹೇಳಿದ್ದಾರೆ. ಆ ಸ್ಮರಣೆ ಸಹಿತವಾಗಿ ಸಾಮರ್ಥ್ಯವಿದ್ದವರು ಶ್ರವಣ ಮನನಾದಿ ಸೇವೆಯನ್ನು ಮಾಡಬೇಕು. ಆ ಸಾಮರ್ಥ್ಯವಿಲ್ಲದವರು ಬಾಯಿಯಿಂದ ಅವರ ಗುಣಗಾನ, ದೇಹದಿಂದ ಪ್ರದಕ್ಷಿಣೆ ನಮಸ್ಕಾರ ಮೊದಲಾದ ಸೇವೆಯನ್ನಾದರೂ ಮಾಡಬೇಕು.

ಸೇವೆ ಮಾನಸಿಕ, ವಾಚಿಕ ಮತ್ತು ದೈಹಿಕ ಎಂದು ಮೂರು ಸ್ತರಗಳಲ್ಲಿ ನಡೆಯಬೇಕು. ಮನಸ್ಸಿನಲ್ಲಿ ಆದರದಿಂದ ಅವನ ಸ್ಮರಣೆ, ಬಾಯಿಯಿಂದ ಅವರ ಗುಣಗಾನ, ದೇಹದಿಂದ ಪ್ರದಕ್ಷಿಣೆ ನಮಸ್ಕಾರ, ದೇವರ ಮನೆಯ ಶುದ್ಧಿ ಪೂಜೋಪಕರಣಗಳ ಶುದ್ಧಿ ಮೊದಲಾದವುಗಳು ನಡೆಯಬೇಕು. ಮೂರೂ ಕಲೆತರೆ ಒಳ್ಳೆಯ ಸೇವೆಯಾಗುತ್ತದೆ. ಇಲ್ಲದಿದ್ದರೆ ವಿಕಲಾಂಗವಾಗುತ್ತದೆ. ಎಲ್ಲದಕ್ಕಿಂತ ಮಾನಸಿಕ ಸೇವೆಯು ಮುಖ್ಯ. ಬಾಯಿಯಿಂದ ಗುಣಗಾನ ಮಾಡಿ ದೇಹದಿಂದ ಪ್ರದಕ್ಷಿಣೆ ನಮಸ್ಕಾರ ಮಾಡಿ ಮನಸ್ಸಿನಲ್ಲಿ ಮಾತ್ರ ಬೇರೆ ವಿಷಯಗಳನ್ನು ಯೋಚನೆ ಮಾಡಿದರೆ ಅದರಿಂದ ಹರಿಗುರುಗಳು ಎಂದೂ ಪ್ರಸನ್ನರಾಗುವುದಿಲ್ಲ. ಮಾನಸಿಕ ಸೇವೆಯು ಚೆನ್ನಾಗಿ ನಡೆಯುವಾಗ ವಾಚಿಕ ಮತ್ತು ದೈಹಿಕ ಸೇವೆಗಳಿಗೆ ಸ್ವಲ್ಪ ತೊಂದರೆ ಬಂದರೂ ಅದು ಸಹ್ಯವಾಗುತ್ತದೆ.

ಬಹಳಷ್ಟು ಜನರು ಹರಿಗುರುಗಳ ಸೇವೆ ಮಾಡುತ್ತಾರೆ. ಆದರೆ ಸಂಕಟ ಬಂದಾಗ ವೆಂಕಟರಮಣ ಎಂಬ ಗಾದೆಯಂತೆ ಸಂಕಟ ಬಂದಾಗ ಮಾತ್ರ ಸೇವೆ ಮಾಡಿ ಆ ಕಷ್ಟ ಪರಿಹಾರವಾದ ತಕ್ಷಣ ಸೇವೆಯನ್ನು ನಿಲ್ಲಿಸಿ ಹರಿಗುರುಗಳನ್ನು ಮರೆತುಬಿಡುತ್ತಾರೆ. ಎಂದೂ ಹಾಗೆ ಮಾಡಬಾರದು. ದೇವರ ಮತ್ತು ಗುರುಗಳ ಸೇವೆ ಜೀವನ ಸ್ವಭಾವವಾಗಬೇಕು. ಆಗ ಮಾತ್ರ ಹರಿಗುರುಗಳು ಪ್ರಸನ್ನರಾಗುತ್ತಾರೆ. ತುಂಬಾ ಕಷ್ಟಕ್ಕೆ ಸಿಲುಕಿದವರು ಸೇವೆ ಮಾಡುವಾಗ ಮನಸ್ಸು ಸ್ವಾಧೀನದಲ್ಲಿಯೇ ಇರುವುದಿಲ್ಲ. ಆ ಕಷ್ಟಗಳ ಕಾರಣ ಮತ್ತು ಸನ್ನಿವೇಶದಲ್ಲಿಯೇ ಮನಸ್ಸು ಬೇಡವೆಂದರೂ ತಿರುಗುತ್ತಿರುತ್ತದೆ. ಆಗ ಮಾನಸಿಕ ಸೇವೆ ಚೆನ್ನಾಗಿ ನಡೆಯುವುದಿಲ್ಲ. ವಾಚಿಕ ಸೇವೆಯೂ ಮಧ್ಯೆ ಮಧ್ಯೆ ನಿಂತು ಹೋಗುತ್ತದೆ. ಆಗ ಮಾಡಬಹುದಾದ ಮತ್ತು ಮಾಡಲೇ ಬೇಕಾದ ಸೇವೆಯೆಂದರೆ ದೈಹಿಕ ಸೇವೆ. ಮನಸ್ಸು ಸ್ವಾಧೀನದಲ್ಲಿಲ್ಲದಿದ್ದರೂ ಹಠ ಹಿಡಿದು ಹರಿಗುರುಗಳ ಸೇವೆಯನ್ನು ಮಾಡಿದರೆ ಅವರು ಪ್ರಸನ್ನರಾಗಿ ಮನಸ್ಸಿಗೂ ಸಮಾಧಾನವನ್ನು ತಂದು ಕೊಡುತ್ತಾರೆ.

ಹೀಗೆ ಜ್ಞಾನಿಗಳ ಸೇವೆಯನ್ನು ಮಾಡಿ ಅವರಿಂದ ಅನುಗ್ರಹ ಪಡೆದು ಉದ್ಧಾರ ಹೊಂದಿದ ವ್ಯಕ್ತಿಗಳು ಅನೇಕ ಮಂದಿ ಇದ್ದಾರೆ. ಅವರಲ್ಲೊಬ್ಬರು ಶ್ರೀಕೃಷ್ಣಾವಧೂತರು. ಅವರು ಶ್ರೀರಾಘವೇಂದ್ರ ಸ್ವಾಮಿಗಳವರ ವಿಶೇಷ ಸೇವೆಯನ್ನು ಮಾಡಿ ಅವರ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ. ಅಷ್ಟೇ ಅಲ್ಲದೆ ಬೇರೆ ಬೇರೆ ಸನ್ನಿವೇಶಗಳಲ್ಲಿ ಮತ್ತು ಬೇರೆ ಬೇರೆ ಪ್ರಕಾರಗಳಿಂದ ರಾಯರ ಸೇವೆಯನ್ನು ಹೇಗೆ ಮಾಡಬೇಕು ಎಂಬ ವಿಷಯವನ್ನು ರಾಯರಿಂದಲೇ ಆಜ್ಞಪ್ತರಾಗಿ ಒಂದು ಪುಸ್ತಕ ರೂಪದಲ್ಲಿ ಬರೆದು ಅದಕ್ಕೆ "ಶ್ರೀ ರಾಘವೇಂದ್ರ ತಂತ್ರ" ಎಂದು ಹೆಸರು ಕೊಟ್ಟಿದ್ದಾರೆ.

ಶ್ರೀ ಕೃಷ್ಣಾವಧೂತರು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿಗೆ ಸೇರಿದ ನಾರಾಯಣದೇವನ ಕೆರೆ ಎಂಬ ಗ್ರಾಮದವರು. ಅವರ ತಂದೆ ತಾಯಿಗಳ ಹೆಸರು ತಿಳಿದು ಬಂದಿಲ್ಲ. ಅವರ ಜನನ ಕ್ರಿ. ಶ. ೧೮೩೬ರಲ್ಲಿ. ಅವರ ತಂದೆಯವರು ಆಗಿನ ಉತ್ತರಾದಿ ಮಠದ ಸ್ವಾಮಿಗಳ ಬಳಿ ಪರಿಚಾರಕರಾಗಿದ್ದರಂತೆ. ಅಂತಹ ಸ್ವಾಮಿಗಳವರ ಮತ್ತು ದೇವರ ಸೇವೆ ಮಾಡಿದುದರಿಂದ ಇಂತಹ ಪುತ್ರ ರತ್ನದ ಜನನವಾಯಿತೆಂದು ನಿಶ್ಚಯವಾಗಿ ತಿಳಿಯುತ್ತದೆ. ತಂದೆತಾಯಿಗಳು ತುಂಬಾ ಸಂತೋಷಗೊಂಡು ಮುದ್ದಾಗಿದ್ದ ತಮ್ಮ ಮಗುವಿಗೆ ಮುದ್ದುಕೃಷ್ಣನೆಂದೇ ಹೆಸರಿಟ್ಟರು. ಮಗುವಿಗೆ ಸುಮಾರು ಎರಡು ವರ್ಷವಾಗಿದ್ದಾಗ ಆಗಿನ ಸೊಂಡೂರು ಸಂಸ್ಥಾನದಲ್ಲಿ ಆಸ್ಥಾನ ಪಂಡಿತರಾಗಿದ್ದ ಶ್ರೀ ಭೀಮಸೇನಾಚಾರ್ಯರೆಂಬ ಒಳ್ಳೆಯ ವಿದ್ವಾಂಸರಿಗೆ ಮಗುವನ್ನು ದತ್ತುವಾಗಿ ಕೊಟ್ಟುಬಿಟ್ಟರು. ಅಂತಹವರ ಮನೆಯಲ್ಲಿ ಬೆಳೆದು ಮಗ ವಿದ್ವಾಂಸನಾಗುವನೆಂದು ತಂದೆ ತಾಯಿಗಳ ಎಣಿಕೆ. ಅದು ಎಂದೂ ತಪ್ಪಾಗಲಿಲ್ಲ. ಭೀಮಸೇನಾಚಾರ್ಯರಿಗೆ ಬೇರೆ ಗಂಡು ಮಕ್ಕಳಿರಲಿಲ್ಲ. ಅವರು ಸಾಕಷ್ಟು ಸ್ಥಿತಿವಂತರಾಗಿದ್ದರು. ಅವರ ಆಸ್ತಿಯ ಮೇಲೆ ದಾಯಾದಿಗಳಿಗೆ ದೃಷ್ಟಿ ಇದ್ದಿತು. ಯಾವುದೋ ಒಂದು ಬಡಕುಟುಂಬದ ಮಗುವನ್ನು ದತ್ತು ತೆಗೆದುಕೊಂಡುದು ಅವರ ಆಸೆಗೆ ಭಂಗ ತಂದಿತು. ಆದ್ದರಿಂದ ಈ ದತ್ತುಕ್ರಮ ಸರಿಯಲ್ಲವೆಂದು ಅವರು ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದರು. ಕೊನೆಗೆ ಆ ವಿವಾದವು ಭೀಮಸೇನಾಚಾರ್ಯರ ಪರವಾಗಿ ತೀರ್ಮಾನವಾಗಿ ದಾಯಾದಿಗಳು ತಮ್ಮ ದಾರಿಯನ್ನು ತಾವು ಹಿಡಿಯಬೇಕಾಯಿತು.

ಭೀಮಸೇನಾಚಾರ್ಯರು ಮುದ್ದುಕೃಷ್ಣನಿಗೆ ಅಕ್ಷರಾಭ್ಯಾಸದಿಂದ ಆರಂಭಿಸಿ ಉಪನಯನದವರೆಗೆ ಎಲ್ಲಾ ಸಂಸ್ಕಾರಗಳನ್ನು ಮಾಡಿದರು. ಔರಸಪುತ್ರನಿಗಿಂತ ಹೆಚ್ಚು ಪ್ರೀತಿಯಿಂದ ನೋಡಿಕೊಂಡು ಸಂಸ್ಕೃತಾಕ್ಷರಾಭ್ಯಾಸದಿಂದ ಆರಂಭಿಸಿ ಕಾವ್ಯ, ವ್ಯಾಕರಣ, ತರ್ಕ ಎಲ್ಲವನ್ನು ಪಾಠ ಹೇಳಿದರು. ಒಳ್ಳೆಯ ಮೇಧಾವಿಯಾದ ಮುದ್ದುಕೃಷ್ಣನನ್ನು ಈ ವೇಳೆಗಾಗಲೇ ಎಲ್ಲರೂ ಮುದ್ದುಕೃಷ್ಣಾಚಾರ್ಯರೆಂದು ಕರೆಯುತ್ತಿದ್ದರು. ವೇದಾಂತ ಪಾಠಗಳನ್ನು ಪ್ರಾರಂಭಿಸಬೇಕೆನ್ನುವ ಸಮಯಕ್ಕೆ ಸರಿಯಾಗಿ ಭೀಮಸೇನಾಚಾರ್ಯರು ದೈವಾಧೀನರಾದರು. ಮನೆಯ ಆಡಳಿತವು ಮಲ ಅಕ್ಕತಂಗಿಯರ ಕೈ ಸೇರಿತು. ಅನಂತರ ಹತ್ತಿರದ ಮುರಾರಿ ಪುರದ ಜಹಗೀರುದಾರರ ಮಗಳನ್ನು ತಂದು ಮುದ್ದುಕೃಷ್ಣಾಚಾರ್ಯರಿಗೆ ವಿವಾಹವನ್ನು ಮಾಡಿದರು. ಆದರೆ ಅವರ ಗೃಹಸ್ಥ ಜೀವನ ಬಹಳ ಕಾಲ ಸುಗಮವಾಗಿ ನಡೆಯಲಿಲ್ಲ. ಮನೆಯಲ್ಲಿ ಮಲ ಅಕ್ಕತಂಗಿಯರ ಕಾಟ ಹೆಚ್ಚಾಯಿತು. ಆಸ್ತಿಯ ಆಸೆಯಿಂದ ಮಾಟಮಂತ್ರಗಳೂ

ಪ್ರಾರಂಭವಾದವು. ಮುದ್ದುಕೃಷ್ಣಾಚಾರ್ಯರು ಬೇಸತ್ತು ಮನೆಯನ್ನು ಬಿಟ್ಟು ವೇದಾಂತ ವಿದ್ಯೆಯನ್ನು ಕಲಿಯಲು ಮೈಸೂರಿಗೆ ಬಂದರು.

ಮೈಸೂರಿನಲ್ಲಿ ರಾಮಾಚಾರ್ಯರೆಂಬ ವಿದ್ವಾಂಸರಲ್ಲಿ ಶಿಷ್ಯ ವೃತ್ತಿಯನ್ನು ವಹಿಸಿ ಅಲಂಕಾರ ಶಾಸ್ತ್ರ ಮತ್ತು ವೇದಾಂತ ವಿದ್ಯೆಗಳನ್ನು ಅಭ್ಯಾಸ ಮಾಡಿದರು. ಅತ್ಯಲ್ಪ ಕಾಲದಲ್ಲಿಯೇ ಎರಡು ಶಾಸ್ತ್ರಗಳಲ್ಲಿಯೂ ಒಳ್ಳೆಯ ಪಾಂಡಿತ್ಯವನ್ನು ಗಳಿಸಿ ಗುರುಗಳ ಮೆಚ್ಚುಗೆಗೆ ಪಾತ್ರರಾದದ್ದಷ್ಟೇ ಅಲ್ಲದೆ ಅಲಂಕಾರ ಶಾಸ್ತ್ರಕ್ಕೆ ಸಂಬಂಧಿಸಿದಂತೆ "ಮಂದಾರಮರಂದಚಂಪೂ" ಎಂಬ ಗ್ರಂಥವನ್ನು ರಚಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಉಳಿದ ಅಲಂಕಾರ ಶಾಸ್ತ್ರಗಳ ಶೈಲಿಗಿಂತ ತುಂಬಾ ಭಿನ್ನವಾಗಿ ವೇದಾಂತ ಶಾಸ್ತ್ರದ ಸಂಸ್ಕಾರದಿಂದ ರಚಿಸಿರುವ ಒಂದು ಅಲಂಕಾರ ಶಾಸ್ತ್ರಗ್ರಂಥ ಇದಾಗಿದೆ.

ವೇದಾಂತ ಶಾಸ್ತ್ರವನ್ನು ಅಭ್ಯಾಸ ಮಾಡಿದ್ದಾಯಿತು. ಆದರೂ ಮನೆಯನ್ನು ತಾವು ಬಿಟ್ಟು ಬರಲು ಕಾರಣವಾದ ಮಾಟಮಂತ್ರಗಳಿಗೆ ಪ್ರತಿಯಾಗಿ ಏನಾದರೂ ಮಾಡಬೇಕೆಂದು ಮುದ್ದುಕೃಷ್ಣಾಚಾರ್ಯರಿಗೆ ಮನಸ್ಸಾಯಿತು. ಅದರಿಂದ ಒಬ್ಬ ಮಲಯಾಳಿ ಮಾಂತ್ರಿಕನ ಸಂಪರ್ಕ ಪಡೆದು ಅವನಿಂದ ಆ ವಿದ್ಯೆಯನ್ನು ಕಲಿತರು. ಅವರು ತಮ್ಮ ಈ ವಿದ್ಯೆಯಿಂದ ಇನ್ನೊಬ್ಬರಿಗೆ ಉಂಟಾದ ತೊದರೆಯನ್ನು ಪರಿಹಾರಮಾಡುತ್ತಿದ್ದರೇ ಹೊರತು ಯಾರಿಗೂ ಕೆಡುಕು ಮಾಡಲು ಈ ವಿದ್ಯೆಯನ್ನು ಬಳಸುತ್ತಿರಲಿಲ್ಲ. ಈ ಸಮಯದಲ್ಲಿಯೇ ಅವರು ಎರಡನೆಯ ವಿವಾಹವನ್ನೂ ಮಾಡಿಕೊಂಡರು. ಸ್ವಲ್ಪ ಸಮಯದ ಮೇಲೆ ಸೊಂಡೂರಿಗೆ ಹಿಂದಿರುಗಿ ಅಲ್ಲಿ ಆಸ್ಥಾನ ವಿದ್ವಾಂಸರ ಪದವಿಯನ್ನೂ ಪಡೆದರು. ಅಲ್ಲಿರುವ ವಿಟ್ಠಲ ದೇವಾಲಯದಲ್ಲಿ ಪಾಠ ಪ್ರವಚನಗಳನ್ನು ಮಾಡುತ್ತಿದ್ದರು. ಪಾಂಡುರಂಗ ವಿಟ್ಠಲ ದೇವರ ಮೇಲೆ ಒಂದು ಚಂಪೂ ಕಾವ್ಯವನ್ನೇ ರಚಿಸಿದರು.

ನಂತರ ಮುದ್ದುಕೃಷ್ಣಾಚಾರ್ಯರು ಸೊಂಡೂರನ್ನು ತ್ಯಜಿಸಿ ಕಂಪ್ಲಿಗೆ ಬಂದು ವಾಸ ಮಾಡಿದರು. ಸಮೀಪದ ಪಂಪಾಕ್ಷೇತ್ರದ ಬಳಿ ಇರುವ ಶಂಭುನಾಥ ಗುಹೆಯಲ್ಲಿ ಎಂಟು ಹತ್ತು ವರ್ಷ ಕಠಿಣ ತಪಸ್ಸನ್ನು ಆಚರಿಸಿದರು. ಅವರು ಅಷ್ಟು ಕಾಲ ಮಾಡಿದ ತಪಸ್ಸು ಶ್ರೀ ರಾಯರ ಅನುಗ್ರಹಕ್ಕಾಗಿ. ಇಬ್ಬರು ಪತ್ನಿಯರನ್ನೂ ಮನೆಯಲ್ಲಿ ಬಿಟ್ಟು ಬಂದು ರಾಯರಿಗಾಗಿ ತಪಸ್ಸು ಮಾಡಿದರಂತೆ. ಸ್ವಲ್ಪ ಸಮಯದ ಮೇಲೆ ಅವರ ಎರಡನೆಯ ಪತ್ನಿ ಬಂದು ತಾವೂ ರಾಯರ ಸೇವೆ ಮಾಡುವುದಾಗಿ ಪತಿಯಿಂದ ಅನುಮತಿ ಪಡೆದು ಪತಿಯ ಪರಿಚಾರಿಕೆಯನ್ನು ಮಾಡಿ

ರಾಯರ ಸೇವೆಯನ್ನು ಮಾಡಿದರಂತೆ. ಆಗ ಮುದ್ದುಕೃಷ್ಣಾಚಾರ್ಯರಿಗೆ ಮೂವ್ವತ್ತೆರಡು ವರ್ಷ. ಈ ಎಲ್ಲಾ ವಿಷಯಗಳನ್ನೂ ಅವರು ಶ್ರೀ ರಾಘವೇಂದ್ರ ತಂತ್ರದ ಪ್ರಥಮ ಪಟಲದಲ್ಲಿ ಹೇಳಿಕೊಂಡಿದ್ದಾರೆ.

ಯಃ ಪೂರ್ವಂ ಬೋಧಯಾಮಾಸ ಸ್ವಪ್ನೇ ಮಾಂ ವಿಮುಖಂ ಗುರೋಃ ।
ದ್ವಾತ್ರಿಂಶದ್ವರ್ಷಪರ್ಯಂತಂ ದುರಾಚಾರರತಂ ಸದಾ ।
ಪ್ರಬೋಧಿತೋಪ್ಯವಿಶ್ವಾಸಾದಪ್ಪಣಾರ್ಯೇಣ ಮೂಢಧೀಃ ।
ನಾಕಾರ್ಷಂ ಶ್ರೀ ಗುರೌ ಭಕ್ತಿಂ ಪುನರಾಸಂ ಕುಕರ್ಮಣಿ ।
ಪುನಃ ಸ್ವಪ್ನೇ ಸಮಾಗತ್ಯ ಮಂತ್ರೌ ಸ ವ್ಯಾಸಕೃಷ್ಣಯೋಃ ।
ಅಪ್ಪಣಾರ್ಯೋऽಹಮಿತ್ಯುಕ್ತ್ವಾ ಸೇವಾಂ ಚೋಪಾದಿಶದ್ ಗುರೋಃ ।
ಅಜ್ಞಾತ್ವಶ್ರೀಗುರುಸ್ತೋತ್ರೋಪ್ಯೇತತ್ಪ್ರಭೃತಿ ವಿಶ್ವಸನ್ ।
ಗುರುಸ್ತೋತ್ರಾರ್ಥಮೇವಾಹಂ ಪಠನ್ ಗುರುಪಮಪೂಜಯಮ್ ॥
ಏವಂ ಕತಿಪಯೇ ಕಾಲೇ ನಿವೃತ್ತೇ ಕೋಪಿ ಸದ್ಯತಿಃ ।
ಸ್ವಪ್ನೇ ಯದಾಹ ಗೋಪ್ಯತ್ವಾತ್ ತದ್ವಕ್ತುಂ ನಹಿ ಸಾಂಪ್ರತಮ್
ತದಾರಭ್ಯಾವಧೂಯಾಹಂ ವಿಷಯಾನ್ ಬಾಂಧವಾನ್ ಗೃಹಮ್
ಕೋಶಂ ಪಿತ್ರಾರ್ಜಿತಂ ಪುತ್ರಾನ್ ಪತ್ನೀದ್ವಯಮಪಿ ಪ್ರಿಯಮ್ ।
ಮನಸಾಪಿ ಪರಿತ್ಯಜ್ಯ ಗೃಹಾದನ್ಯತ್ರ ತಸ್ಥಿವಾನ್ ।
ಉಪಾಸ್ಯ ಗುರುಪಾದಾಬ್ಜಮವಧೂತಸ್ತತೋಭವಮ್ ।
ಲೋಕೇ ಪಿತ್ರೋರ್ಯಥಾ ಪುತ್ರೇ ತತೋಪಿ ಪ್ರೇಮತೋಧಿಕಾತ್ ।
ಮಾಂ ರಕ್ಷತಿ ಗುರುಸ್ತಸ್ಮಾತ್ಸ ಪಿತಾಹಂ ಚ ತತ್ಸುತಃ ॥

"ಎಂದೂ ಗುರುಗಳ (ರಾಘವೇಂದ್ರ ಸ್ವಾಮಿಗಳ) ಉಪಾಸನೆಯನ್ನು ಮಾಡದಿದ್ದ ನನಗೆ ಸ್ವಪ್ನದಲ್ಲಿ ಬಂದು ಅಪ್ಪಣಾಚಾರ್ಯರು ಒಮ್ಮೆ ಎಚ್ಚರಿಸಿದರು. ಮೂವತ್ತೆರಡು ವರ್ಷದವರೆಗೂ ದುರಾಚಾರರತನಾಗಿದ್ದ ನಾನು ಅವರು ಎಚ್ಚರಿಸಿದರೂ ಅದಕ್ಕೆ ಗಮನ ಕೊಡದೆ ಶ್ರೀಗುರುಗಳಲ್ಲಿ ಭಕ್ತಿಯನ್ನು ಮಾಡದೆ ದುರಾಚಾರ (ವಾಮಾಚಾರ) ರತನಾಗಿಯೇ ಇದ್ದೆ. ನಂತರ ಅಪ್ಪಣಾಚಾರ್ಯರು ಇನ್ನೊಮ್ಮೆ ಸ್ವಪ್ನದಲ್ಲಿ ಬಂದು ನನಗೆ ತಾವು ಅಪ್ಪಣಾಚಾರ್ಯರು ಎಂದು ಹೇಳಿ ಶ್ರೀ ಕೃಷ್ಣಮಂತ್ರ ಮತ್ತು ಶ್ರೀ ವೇದವ್ಯಾಸ ಮಂತ್ರಗಳನ್ನು ಉಪದೇಶ ಮಾಡಿ ಗುರುಗಳ ಸೇವೆಯನ್ನು ಮಾಡುವ ಕ್ರಮವನ್ನು ತಿಳಿಸಿದರು. ಅಲ್ಲಿಯವರೆಗೆ ನಾನು ಶ್ರೀ ರಾಘವೇಂದ್ರ ಸ್ತೋತ್ರವನ್ನೇ ಹೇಳಿಕೊಳ್ಳದಿದ್ದರೂ ಸ್ವಪ್ನದಿಂದ ಎಚ್ಚರವಾದ ಕೂಡಲೇ

ಅಪ್ಪಣಾಚಾರ್ಯರ ಮಾತಿನಲ್ಲಿ ತುಂಬಾ ವಿಶ್ವಾಸವುಳ್ಳವನಾಗಿ ಗುರುಸ್ತೋತ್ರವನ್ನು ಕಲಿತು ಗುರುಗಳ ಉಪಾಸನೆಯನ್ನು ಮಾಡಿದೆ. ಹೀಗೆ ಕೆಲವು ಸಮಯ ಕಳೆದ ಮೇಲೆ ಒಂದು ರಾತ್ರಿ ಸ್ವಪ್ನದಲ್ಲಿ ಒಬ್ಬ ಶ್ರೇಷ್ಠ ಯತಿಗಳು ಬಂದು ಆದೇಶ ನೀಡಿದರು. ಅದು ರಹಸ್ಯವಾದುದರಿಂದ ಅದನ್ನು ಇನ್ನೊಬ್ಬರಿಗೆ ತಿಳಿಸುವ ಸಾಧ್ಯತೆ ಇಲ್ಲ. ಆನಂತರ ನಾನು ಇಬ್ಬರು ಹೆಂಡತಿಯರನ್ನೂ ಮನೆ ಬಂಧುಗಳು ಪಿತ್ರಾರ್ಜಿತವಾದ ಆಸ್ತಿ ಎಲ್ಲವನ್ನೂ ಮನಸ್ಸಿನಿಂದಲೂ ತೊರೆದು ಮನೆಯನ್ನು ಬಿಟ್ಟು ಬೇರೆ ಸ್ಥಳಕ್ಕೆ ಹೋಗಿ ಅವಧೂತನಾಗಿ ಗುರುಗಳ ಉಪಾಸನೆಯನ್ನು ಮಾಡಿದೆ. ತಂದೆತಾಯಿಗಳಿಗೆ ಮಗನ ಮೇಲೆ ಎಷ್ಟು ಪ್ರೀತಿ ಇರುತ್ತದೆಯೋ ಅದಕ್ಕಿಂತ ಹೆಚ್ಚು ಪ್ರೀತಿ ಗುರುಗಳಿಗೆ ನನ್ನ ಮೇಲೆ ಇದೆ. ಅವರು ನನ್ನನ್ನು ರಕ್ಷಿಸುತ್ತಾರೆ ಆದ್ದರಿಂದ ಅವರು ನನ್ನ ತಂದೆ. ನಾನು ಅವರ ಪುತ್ರ''.

ಅವರು ಈ ಕಠಿಣ ತಪಸ್ಸನ್ನು ಆಚರಿಸಿ ನಂತರ ಸ್ವಲ್ಪ ಸಮಯ ಆದವಾನಿಯಲ್ಲಿ ವಾಸ ಮಾಡಿದರಂತೆ. ಆ ವೇಳೆಗೆ ಅವರ ಇಬ್ಬರು ಪತ್ನಿಯರೂ ದೈವಾಧೀನರಾದರು. ಅವರಿಗೆ ನಾಲ್ಕು ಗಂಡು ಮಕ್ಕಳು ಮತ್ತು ಒಬ್ಬ ಮಗಳು ಇದ್ದುದಾಗಿ ಹೇಳುತ್ತಾರೆ. ಅನಂತರ ಅವರ ಜೀವನದಲ್ಲಿ ರಾಯರ ಮಹಿಮೆಯನ್ನು ಸೂಚಿಸುವ ಅನೇಕ ಪವಾಡಗಳು ನಡೆದವು. ಅವರು ಸುಮಾರು ತಮ್ಮ ಅರವತ್ತನೆಯ ವಯಸ್ಸಿನಲ್ಲಿ ಪಾರ್ಥಿವ ದೇಹವನ್ನು ತ್ಯಜಿಸಿದರು.

ಅವರ ಜೀವನದ ಮುಖ್ಯ ಸಾರ ರಾಯರ ಉಪಾಸನೆ. ಅಪ್ಪಣಾಚಾರ್ಯರು ಸೂಚಿಸಿದಂತೆ ತಾವು ಮಾಡಿದ ರಾಯರ ಉಪಾಸನೆಯ ಕ್ರಮ. ಅದು ಇನ್ನೊಬ್ಬರು ಉಪಾಸನೆ ಮಾಡಬೇಕಾದ ಕ್ರಮವೂ ಹೌದು. ಅದನ್ನು ಒಂದು ಗ್ರಂಥರೂಪದಲ್ಲಿ ಬರೆದಿಟ್ಟಿದ್ದಾರೆ. ಇದಕ್ಕೆ 'ಶ್ರೀರಾಘವೇಂದ್ರತಂತ್ರ'' ಎಂದು ಹೆಸರು. ಈ ಗ್ರಂಥ ರಚನೆಯ ಹಿನ್ನಲೆಯನ್ನು ಅವರೇ ತಿಳಿಸಿದ್ದಾರೆ.

ಅಥ ಕೃಷ್ಣಾವಧೂತೋಽಹಂ ಗುರುರಾಜಪ್ರಿಯಃ ಸುತಃ ।
ವಕ್ಷ್ಯೇ ಮಹಿ ಪಿತುಸ್ತಸ್ಯ ಕೃಪಾಂ ಸರ್ವಾತಿಶಾಯಿನೀಮ್ ।

ಯದ್ಯಪ್ಯೇತನ್ನ ಪ್ರಕಾಶ್ಯಂ ರಹಸ್ಯಂ ವಿಸ್ಮಯಪ್ರದಂ ।
ತಥಾಪಿ ವಕ್ಷ್ಯೇ ಗ್ರಂಥೇಸ್ಮಿನ್ ಪ್ರತ್ಯಯಾರ್ಥಂ ತದಾಜ್ಞಯಾ ।
ಕದಾಚಿದ್ ಬಂಧು ದಾರಿದ್ರ್ಯರುಣರಾಜಾದಿಪೀಡಿತಃ ।

ಭೃಶಂ ಶೋಚನ್ ಗುರುಂ ಧ್ಯಾಯನ್ನಸ್ವಾಪ್ಸಂ ಕಲುಷಾಶಯಃ ।
ತತಃ ಸೂರ್ಯೋದಯೇ ಕಾಲೇ ಸ್ವಪ್ನೇ ಕೋಪಿ ಯತೀಶ್ವರಃ ।
ಆಕಟೇರ್ಜಾನುಪರ್ಯಂತಂ ಶುದ್ಧ ಕಾಷಾಯವಸ್ತ್ರವಾನ್ ।
ತುಲಸೀ ಮಣಿಮಾಲಾಭ್ಯಾಂ ಶೋಭಿತೇನ ವಿವಾಸಸಾ ।
ವಿಶಾಲವಕ್ಷಸಾ ತೈಲಸ್ನಿಗ್ಧಶ್ಯಾಮಲವರ್ಚಸಾ ।
ಆಪ್ರಾವೃತೇನ ಶಿರಸಾ ಪಾದುಕಾಭ್ಯಾಂ ಚ ರಾಜಿತಃ ।
ಶಿಷ್ಯೇಣಾನುಗತಃ ಪಶ್ಚಾಜ್ಜಲಪಾತ್ರಧರೇಣ ಚ ।
ವೇಗಾದಾಗತ್ಯ ಮಾಂ ಹಸ್ತೇ ಗೃಹೀತ್ವಾಂತರುಪಾಗತಃ ।
ಶಿಷ್ಯಸ್ತು ದ್ವಾರ ಏವಾಸಿದುಪಾವಿಶದಸೌ ಗುರುಃ ।
ಅಥ ಮಾಂ ಪ್ರಾಣಿನಂ ಸಂತಂ ವತ್ಸೇತ್ಯಾಮಂತ್ರ್ಯ ಸೋಬ್ರವೀತ್ ।
ಪ್ರದರ್ಶಯನ್ ತಾಮ್ರಪತ್ರಂ ಲಿಖಿತಂ ನಾಗರಾಕ್ಷರೈಃ ।
ಆತ್ಮತ್ಯೇವ ಪರಂ ದೇವ ಮುಪಾಸ್ಯ ಹರಿಮವ್ಯಯಂ ।
ಪ್ರಾಣಸ್ಯೇದಂ ವಶೇ ಸರ್ವಂ ಪ್ರಾಣಃ ಪರವಶೇ ಸ್ಥಿತಃ ।

---

ಮಯ್ಯಧಿಷ್ಠಾಯ ತೇ ಭಾರಂ ಸ ಮನ್ಮಂತ್ರಾದ್ಯುಪಾಸನಮ್ ।
ಗ್ರಂಥಂ ಕಮಪಿ ಕರ್ತುಂ ತ್ವಂ ಪ್ರಾರಭಸ್ವ ಭಯಂ ನ ತೇ ।
ಯೋಗ್ಯತಾಮನುಸೃತ್ಯಾಹಮಯೋಗ್ಯೇಚ್ಛಾಂ ನಿವಾರಯನ್ ।
ವಿಪತ್ತೀಃ ಪರಿಹೃತ್ವಾ ತೇ ಸುಖಂ ದಾಸ್ಯಾಮಿ ಪುತ್ರಕ ।
ಓಮಿತ್ಯುಕ್ತ್ವಾ ಯತಿಸ್ತಚ್ಚ ತಾಮ್ರಪತ್ರಂ ತಥಾಕ್ಷತಾನ್ ।
ದತ್ವಾ ಮಹ್ಯಮದೃಶ್ಯೋಭೂತ್ ಪ್ರಬುದ್ಧೋಹಂ ತತಃ ಕ್ಷಣಾತ್ ।
ಅಪಶ್ಯಂ ಶಿರಸಃ ಸ್ಥಾನೇ ಸಾಕ್ಷತಾಂ ತಾಮ್ರಪತ್ರಿಕಾಮ್ ।
ಶಾಂತಃ ಶೊಕಸ್ತದಾ ಮೇಭೂದಾಸಾರೈಃ ಪಾದಪೋ ಯಥಾ ।
ಚಿತ್ತಂ ಪ್ರಸನ್ನಮಭವದ್ ಯಥಾಂಭಃ ಕುಂಭಜೋದಯಾತ್ ।
ತತಃ ಶ್ರೀ ರಾಘವೇಂದ್ರಾರ್ಯಗುರುಂ ಮೋದಾದಪೂಜಯಮ್ ।
ಆರಿರಂಭಯಿಷುರ್ಗ್ರಂಥಂ ರಾಘವೇಂದ್ರಾರ್ಯ ತಂತ್ರಕಮ್ ।
ಆಸ್ತೌಷಂ ಸ್ತವರಾಜೇನ ಭಕ್ತ್ಯುನ್ಮಾದಭ್ರಮನ್ಮನಾಃ ॥

"ಗುರುರಾಜರ ಪ್ರಿಯಪುತ್ರನಾದ ಕೃಷ್ಣಾವಧೂತನಾದ ನಾನು ನನ್ನಲ್ಲಿ ಆ ತಂದೆಗಿರುವ ಅತಿಶಯವಾದ ಕೃಪೆಯನ್ನು ತಿಳಿಸುತ್ತೇನೆ. ಯದ್ಯಪಿ ರಹಸ್ಯವೂ ಆಶ್ಚರ್ಯಕರವೂ ಆದ ಈ ವಿಷಯವನ್ನು ಹೇಳಬಾರದು. ಆದರೂ ರಾಯರ ಅಪ್ಪಣೆಯಂತೆ ಅವರ ಮೇಲೆ ಹೆಚ್ಚು ಭಕ್ತಿಯುಂಟಾಗುವ ಉದ್ದೇಶದಿಂದ ಈ ಗ್ರಂಥದಲ್ಲಿ ತಿಳಿಸುತ್ತೇನೆ.

ನಾನು ಒಮ್ಮೆ ಅನೇಕ ವಿಧವಾದ ಸಂಸಾರ ತಾಪತ್ರಯದಿಂದ ದುಃಖ ಪಡುತ್ತಾ ಗುರುಗಳ ಸ್ಮರಣೆಯನ್ನೇ ಮಾಡಿಕೊಂಡು ಅಸ್ವಸ್ಥ ಮನಸ್ಸಿನಿಂದ ಮಲಗಿದೆ. ಬೆಳಗಿನ ಸಮಯಕ್ಕೆ ನನ್ನ ಸ್ವಪ್ನದಲ್ಲಿ ಒಬ್ಬ ಯತಿ ಬಂದರು. ಅವರ ಸೊಂಟದಿಂದ ಪಾದದವರೆಗೆ ಕಾವಿಯ ವಸ್ತ್ರವನ್ನುಟ್ಟಿದ್ದರು. ಏನನ್ನೂ ಹೊದೆಯದಿದ್ದ ಅವರ ವಿಶಾಲ ವಕ್ಷ ಸ್ಥಳದಲ್ಲಿ ತುಲಸಿಮಣಿ ಮಾಲೆ ಮತ್ತು ಕಮಲಾಕ್ಷಮಾಲೆಗಳಿದ್ದವು. ಎಣ್ಣೆಗೆಂಪು ಬಣ್ಣ. ತಲೆಯ ಮೇಲೆ ಒಂದು ವಸ್ತ್ರವಿದ್ದಿತು. ಪಾದುಕೆಗಳನ್ನು ಧರಿಸಿದ್ದರು. ಅವರ ಹಿಂದೆ ನೀರಿನ ಕಮಂಡಲವನ್ನು ಹಿಡಿದ ಒಬ್ಬ ಶಿಷ್ಯರಿದ್ದರು. ಗುರುಗಳು ವೇಗವಾಗಿ ಬಂದು ನನ್ನ ಕೈಯನ್ನು ಹಿಡಿದುಕೊಂಡು ಒಳಗೆ ಬಂದರು. ಶಿಷ್ಯರು ಬಾಗಿಲಿನ ಹೊರಗೇ ನಿಂತುಕೊಂಡರು. ಗುರುಗಳು ಬಂದು ಒಳಗೆ ಕುಳಿತುಕೊಂಡು ಸಾಮಾನ್ಯಪ್ರಾಣಿಯಾದ ನನ್ನನ್ನು ವತ್ಸ ಎಂದು ಸಂಬೋಧಿಸಿ ನಾಗರಾಕ್ಷರಗಳಲ್ಲಿ ಬರೆದಿದ್ದ ಒಂದು ತಾಮ್ರಪತ್ರವನ್ನು ತೋರಿಸಿ ಮಾತನಾಡಿದರು. ಸರ್ವೋತ್ತಮನಾದ ಶ್ರೀಹರಿಯನ್ನು ಸ್ವಾಮಿ ಎಂದು ಉಪಾಸನೆ ಮಾಡು. ಜಗತ್ತೆಲ್ಲವೂ ಮುಖ್ಯ ಪ್ರಾಣನ ವಶದಲ್ಲಿರುತ್ತದೆ. ಮುಖ್ಯಪ್ರಾಣನು ಯಾವಾಗಲೂ ಹರಿಯ ವಶದಲ್ಲಿರುತ್ತಾನೆ. ನಿನ್ನ ಎಲ್ಲಾ ಭಾರವನ್ನೂ ನನ್ನ ಮಂತ್ರದ ಜಪ ಮತ್ತು ನನ್ನ ಉಪಾಸನೆಯನ್ನು ಮಾಡುವ ಭಾರದ ಜೊತೆಗೆ ನನ್ನ ಮೇಲೆ ಹಾಕಿ ಒಂದು ಗ್ರಂಥವನ್ನು ರಚನೆ ಮಾಡು. ಈ ವಿಷಯದಲ್ಲಿ ಹೆದರಬೇಕಾಗಿಲ್ಲ. ನಿನ್ನ ಯೋಗ್ಯತೆಯನ್ನನುಸರಿಸಿ ಅಯೋಗ್ಯಬಯಕೆಗಳನ್ನು ನಿವಾರಿಸಿ ನಿನ್ನ ವಿಪತ್ತುಗಳನ್ನು ಪರಿಹರಿಸಿ ನಿನಗೆ ಸುಖವನ್ನು ಕೊಟ್ಟು ಕಾಪಾಡುತ್ತೇನೆ ಎಂದು ಹೇಳಿ ಆ ತಾಮ್ರಪತ್ರವನ್ನೂ ಮತ್ತು ಮಂತ್ರಾಕ್ಷತೆಯನ್ನೂ ಕೊಟ್ಟು ಅದೃಶ್ಯರಾದರು. ನನಗೆ ತಕ್ಷಣ ಎಚ್ಚರವಾಗಿ ನೋಡಿದಾಗ ನನ್ನ ತಲೆಯ ಬಳಿ ಅದೇ ತಾಮ್ರಪತ್ರವೂ ಮಂತ್ರಾಕ್ಷತೆಯೂ ಇದ್ದಿತು. ನನ್ನ ದುಃಖವೆಲ್ಲವೂ ನಿವಾರಣೆಯಾಗಿ ಮನಸ್ಸು ಪ್ರಶಾಂತವಾಯಿತು. ಅನಂತರ ಶ್ರೀ ರಾಯರನ್ನು ಭಕ್ತಿಯಿಂದ ಪೂಜಿಸಿದೆ. "ಶ್ರೀ ರಾಘವೇಂದ್ರತಂತ್ರ"ವೆಂಬ ಗ್ರಂಥವನ್ನು ಬರೆಯಲು ಪ್ರಾರಂಭಿಸಲು ಬಯಸಿ ಭಕ್ತಿಯಿಂದ ಹುಚ್ಚು ಹಿಡಿದ ಮನಸ್ಸಿನಿಂದ ಸ್ತವರಾಜದಿಂದ ಅವರ ಸ್ತೋತ್ರವನ್ನು ಮಾಡಿದೆ".

ಈ ರಾಘವೇಂದ್ರ ತಂತ್ರ ಗ್ರಂಥದಲ್ಲಿ ೧೫ ಪಟಲಗಳಿವೆ ಪೂರ್ವಪೀಠಿಕಾ, ಮಂತ್ರಾನುವರ್ಣನ, ರಾಘವೇಂದ್ರಹೃದಯ, ಗುರುಪೂಜಾವಿಧಾನ, ರಕ್ಷಾಕವಚ, ಬಂಧಮೋಚನಕವಚ, ಗುರುಮಂತ್ರರಾಜಾತ್ಮಕ ಅಷ್ಟೋತ್ತರ ಶತನಾಮಾಮೃತ, ಸಹಸ್ರನಾಮ ಸ್ತೋತ್ರ ಇವು ಕ್ರಮವಾಗಿ ಮೊದಲಿನ ಎಂಟು ಪಟಲಗಳು. ಒಂಬತ್ತನೆಯ ಪಟಲಕ್ಕೆ ಗುರುದಶಸ್ತೋತ್ರ ಪಟಲವೆಂದು ಹೆಸರು. ಇದೆ ಬೇರೆ ಬೇರೆ ಉದ್ದೇಶದಿಂದ ಮಾಡಬೇಕಾದ ಹತ್ತು ಸ್ತೋತ್ರಗಳ ಸಂಕಲನ ರೂಪವಾಗಿದೆ. ಅಭಯಪ್ರದಾನಸ್ತೋತ್ರ, ಅಪತ್ಪರಿಹಾರಸ್ತೋತ್ರ, ದುಃಖಹರಣಸ್ತೋತ್ರ, ಕರಾವಲಂಬನಸ್ತೋತ್ರ, ಸಂಸಾರೋತ್ತರಣ ಸ್ತೋತ್ರ, ಪ್ರತಿಕೂಲಸ್ವಾನುಕೂಲೀಕರಣಸ್ತೋತ್ರ, ಸಂತೋಷಪ್ರದಸ್ತೋತ್ರ, ದಾರಿದ್ರ್ಯಮೋಚನಸ್ತೋತ್ರ ಮತ್ತು ಗುರುಕರುಣಾಸಂಪದಸ್ತೋತ್ರ ಎಂಬಿವೇ ಆ ಹತ್ತು ಸ್ತೋತ್ರಗಳು. ಆಯಾ ಸ್ತೋತ್ರದ ಹೆಸರೇ ಅದರ ಫಲವನ್ನು ತಿಳಿಸುತ್ತದೆ. ಖಗಗತಿ ಎಂಬ ಪ್ರದಕ್ಷಿಣಾ ಗದ್ಯವು ಹತ್ತನೆಯ ಪಟಲ. ಅನಂತರ ಗಾಥಾಸ್ತುತಿ, ಋಣಮೋಚನ ಸ್ತೋತ್ರ, ಪಾದುಕಾಪೂಜಾವಿಧಾನ, ಕ್ಷಮಾಪಣ, ಗುರುಸ್ತವರಾಜ ಇವು ಕ್ರಮವಾಗಿ ಹನ್ನೊಂದರಿಂದ ಹದಿನೈದನೆಯ ಪಟಲಗಳು.

ಶಾಸ್ತ್ರ ಸಾಮಾನ್ಯಕ್ಕೇ ತಂತ್ರ ಎಂದು ಹೆಸರುದ್ದರೂ, ಪೂಜಾವಿಧಾನ, ಜಪವಿಧಾನ ಮೊದಲಾದ ಪ್ರಕಾರಗಳನ್ನು ತಿಳಿಸಿಕೊಡುವ ಗ್ರಂಥಕ್ಕೂ ತಂತ್ರ ಎಂದೇ ಹೆಸರು. ಜಪ ಮೊದಲಾದವುಗಳು ತಂತ್ರಗಳು. ಅವುಗಳ ವಿಧಾನವನ್ನು ತಿಳಿಸುವ ಗ್ರಂಥವೂ ತಂತ್ರವೆಂದೇ ಕರೆಯಲ್ಪಡುತ್ತದೆ. ನಮ್ಮ ಸಂಧ್ಯಾವಂದನಾದಿ ಸರ್ವವೈದಿಕ ಕ್ರಿಯೆಗಳೂ ಮಂತ್ರತಂತ್ರ ಉಭಯಾತ್ಮಕವಾದುದು. ಮಂತ್ರ ಮತ್ತು ಅದರ ಅರ್ಥವನ್ನು ಕ್ರಿಯೆಯಲ್ಲಿ ಅನುಸಂಧಾನ ಮಾಡುವುದು ಒಂದು ಅಂಶ. ಅದನ್ನು ಮಾಡುವಾಗ ಅನುಸರಿಸಬೇಕಾದ ಕ್ರಮಗಳು, ಅಂಗನ್ಯಾಸ, ಕರನ್ಯಾಸ ಇವೆಲ್ಲವೂ ತಂತ್ರಕ್ಕೆ ಸೇರಿದವು. ಮಂತ್ರಕ್ಕಿಂತ ತಂತ್ರ ಶೀಘ್ರ ಫಲವನ್ನು ಕೊಡುವುದೆಂದು ಹೇಳುತ್ತಾರೆ. ತಂತ್ರದಿಂದ ಒಳ್ಳೆಯ ಫಲವನ್ನು ಪಡೆಯಬಹುದು. ದುರುದ್ದೇಶವಿದ್ದರೆ ಇನ್ನೊಬ್ಬರಿಗೆ ಕೆಟ್ಟಫಲವುಂಟಾಗುವಂತೆಯೂ ಮಾಡಬಹುದು. ದುರ್ಬುದ್ಧಿಯುಳ್ಳ ಮಾನವ ಪೀಳಿಗೆಯಲ್ಲಿ ತಂತ್ರಜ್ಞಾನದ ದುರುಪಯೋಗವಾಗುವುದೆಂದು ತಿಳಿದ ಋಷಿಮುನಿಗಳು ಪರಂಪರೆಯಲ್ಲಿ ತಂತ್ರಜ್ಞಾನದ ಉಪದೇಶವು ಬರದಂತೆ ವ್ಯವಸ್ಥೆ ಮಾಡಿದ್ದಾರೆ. ಆದರ್ ಮಂತ್ರಜ್ಞಾನ ಮಾತ್ರ ಅತ್ಯಂತ ಅವಶ್ಯಕವಾದ್ದರಿಂದ ಅದರ ಅಬಾಧಿತಾರ್ಥಜ್ಞಾನ ಪರಂಪರೆ ಬೆಳೆದು ಬಂದಿದೆ. ತಂತ್ರಜ್ಞಾನವಿಲ್ಲದಿದ್ದರೂ ತಂತ್ರದಿಂದ ಒಳ್ಳೆಯ ಫಲವನ್ನು ಪಡೆಯಲು ಅನುಕೂಲವಾಗುವಂತೆ ಹಿರಿಯರು ತಂತ್ರವನ್ನು ಮಾತ್ರ ಪರಂಪರೆಯಲ್ಲಿ ನಡೆಸಿಕೊಂಡು ಬಂದಿದ್ದಾರೆ. ಆಚಾರ್ಯರೇ ಜಪಪೂಜಾ ಪ್ರತಿಷ್ಠೆಗಳಿಗೆ ಅನುಕೂಲವಾಗುವಂತೆ ತಂತ್ರಸಾರ ಸಂಗ್ರಹವೆಂಬ ಗ್ರಂಥವನ್ನು ರಚಿಸಿ ಅನುಗ್ರಹವನ್ನು ಮಾಡಿದ್ದಾರೆ. ಅದು

ಮುಖ್ಯವಾಗಿ ದೇವರ ಮತ್ತು ದೇವತೆಗಳ ಉಪಾಸನೆಗೆ ಸಂಬಂಧಿಸಿದ ತಂತ್ರಗಳನ್ನು ವಿವರಿಸುವ ಗ್ರಂಥ. ಆ ಗ್ರಂಥದಲ್ಲಿ ಗುರುಗಳ ಉಪಾಸನೆಯೂ ಸಂಕ್ಷೇಪವಾಗಿ ಸೂಚಿತವಾಗಿದೆ. ಅದನ್ನು ವಿಸ್ತಾರ ಮಾಡಿ ಒಬ್ಬ ಅಪರೋಕ್ಷ ಜ್ಞಾನಿಗಳನ್ನು ಶೃಂಗಗ್ರಾಹಿಕತಯಾ ಇಟ್ಟುಕೊಂಡು ಅವರ ಉಪಾಸನೆಯ ವಿಧಾನವನ್ನು ತಿಳಿಸಿ ಅದರಂತೆ ಬೇರೆ ಬೇರೆ ಜ್ಞಾನಿಗಳ ಉಪಾಸನೆಯನ್ನು ಮಾಡುವ ವಿಧಾನವನ್ನು ಸೂಚಿಸುವ ಉದ್ದೇಶದಿಂದ ಹೊರಟಿರುವ ಗ್ರಂಥವೇ ಈ ಶ್ರೀ ರಾಘವೇಂದ್ರ ತಂತ್ರ. ಇದು ಪ್ರತ್ಯಕ್ಷ ಸಿದ್ಧಿಪ್ರದವಾದ ತಂತ್ರವೆಂದು ಗ್ರಂಥಕರ್ತೃಗಳು ಮತ್ತೆ ಮತ್ತೆ ಹೇಳಿದ್ದಾರೆ.

ಪ್ರಥಮ ಪಟಲವು ಪೂರ್ವಪೀಠಿಕಾರೂಪವಾದುದು. ಇದರಲ್ಲಿ ತಾವು ಶ್ರೀ ರಾಯರ ಉಪಾಸನೆಯನ್ನು ಪ್ರಾರಂಭಿಸಲು ಕಾರಣವಾದ ತಮ್ಮ ಪೂರ್ವಜೀವನ ಚರಿತ್ರೆಯನ್ನು ಸಂಕ್ಷೇಪವಾಗಿ ನಿರೂಪಿಸಿ ರಾಘವೇಂದ್ರತಂತ್ರ ಗ್ರಂಥ ರಚನೆಯ ಹಿನ್ನಲೆಯನ್ನೂ ವಿವರಿಸಿ ಈ ತಂತ್ರದ ಅನುಷ್ಠಾನದಿಂದ ದೊರೆಯುವ ಇಷ್ಟಪ್ರಾಪ್ತಿ ಮತ್ತು ಅನಿಷ್ಟನಿವೃತ್ತಿ ರೂಪವಾದ ಫಲಗಳ ಅನೇಕ ವಿಶೇಷ ಪ್ರಕಾರಗಳನ್ನು ನಿರೂಪಿಸಿದ್ದಾರೆ.

ದ್ವಿತೀಯ ಪಟಲಕ್ಕೆ ಮಂತ್ರವರ್ಣನವೆಂದು ಹೆಸರು. ಶ್ರೀ ರಾಘವೇಂದ್ರ ಸ್ವಾಮಿಗಳವರ ಮಂತ್ರ ಒಂದು ಅಷ್ಟಾಕ್ಷರ ಮಂತ್ರ. ಅದಕ್ಕೆ ಬೇಕಾದ ಅಂಗನ್ಯಾಸ, ಕರನ್ಯಾಸ, ಋಷ್ಯಾದಿಗಳು ಮತ್ತು ಧ್ಯಾನಪ್ರಕಾರಗಳನ್ನು ತಿಳಿಸಿದ್ದಾರೆ. ಯಾವುದೇ ತಂತ್ರದ ಅನುಷ್ಠಾನ ಮಾಡಬೇಕಾದರೆ ಮೊದಲು ಅಪ್ಪಣಾಚಾರ್ಯರಿಂದ ಕೃತವಾದ ರಾಘವೇಂದ್ರ ಸ್ತೋತ್ರವನ್ನು ಜಪಿಸಿ ಅನಂತರ "ಅಪ್ಪಣಾರ್ಯಾಯ ನಮಃ" ಎಂದು ಅಪ್ಪಣಾರ್ಯರಿಗೆ ಹತ್ತು ಅಥವಾ ನೂರು ಬಾರಿ ನಮಸ್ಕಾರವನ್ನು ಸಲ್ಲಿಸಿ ಅನಂತರ ತಂತ್ರಗಳನ್ನು ಅನುಷ್ಠಾನ ಮಾಡಬೇಕೆಂದು ತಿಳಿಸಿದ್ದಾರೆ. ಈ ಮಂತ್ರದಿಂದ ಜಪಮಾತ್ರವಲ್ಲದೆ ಅದರಿಂದ ಯಂತ್ರವನ್ನು ಬರೆದು ಪೂಜಿಸುವ ಕ್ರಮವೂ ಹೇಳಲ್ಪಟ್ಟಿದೆ. ಯಂತ್ರದ ರೇಖೆಗಳ ವಿನ್ಯಾಸ, ಬೀಜಾಕ್ಷರಗಳು ಎಲ್ಲವನ್ನೂ ತಿಳಿಸಿದ್ದಾರೆ. ಅಪ್ಪಣಾರ್ಯರು ರಚಿಸಿದ ರಾಘವೇಂದ್ರಸ್ತೋತ್ರದಲ್ಲಿ ಒಂದೊಂದು ಶ್ಲೋಕವು ಒಂದೊಂದು ವಿಶಿಷ್ಟ ಫಲವನ್ನು ಕೊಡುವುದೆಂದು ತಿಳಿಸಿದ್ದಾರೆ.

ತೃತೀಯ ಪಟಲಕ್ಕೆ ರಾಘವೇಂದ್ರಹೃದಯ ಎಂದು ಹೆಸರು. ಹೃದಯ ಎಂಬುದು ತಂತ್ರದಲ್ಲಿ ಬಳಸುವ ಒಂದು ವಿಶಿಷ್ಟ ರೀತಿಯ ಸ್ತೋತ್ರ. ನಾವು ಆದಿತ್ಯ ಹೃದಯ, ಲಕ್ಷ್ಮೀಹೃದಯ ಮೊದಲಾದ ಸ್ತೋತ್ರಗಳನ್ನು ಕೇಳಿದ್ದೇವೆ. ಅದರಂದೆ ಇದು ರಾಘವೇಂದ್ರಹೃದಯ. ಇದರಲ್ಲಿ ಗುರುಗಳ ಹಿಂದಿನ ಅವತಾರಗಳು, ಆ ಅವತಾರಗಳಲ್ಲಿ

ಮಾಡಿದ ದೇವರ ಉಪಾಸನೆಯ ರೀತಿ, ಆಗ ಈಗಿನ ಅವರ ಶಿಷ್ಯರಾದ ಅಪ್ಪಣಾಚಾರ್ಯರು ಮತ್ತು ಕೃಷ್ಣಾಚಾರ್ಯರು ಅವರ ಸೇವೆಯನ್ನು ಮಾಡಲು ಪಡೆದ ಜನ್ಮಗಳು, ಅವರ ಹೆಸರು ಮುಂತಾದ ಅನೇಕ ಸೂಕ್ಷ್ಮವಾದ ಮತ್ತು ರಹಸ್ಯವಾದ ವಿಷಯಗಳನ್ನು ನಿರೂಪಿಸಿದ್ದಾರೆ.

ಚತುರ್ಥಪಟಲಕ್ಕೆ ಪೂಜಾಪಟಲವೆಂದು ಹೆಸರು. ರಾಯರ ಸೇವೆ ಮಾಡುವವರೆಲ್ಲರೂ ತಮತಮಗೆ ತಿಳಿದಂತೆ ರಾಯರ ಪೂಜೆ ಮಾಡುವುದುಂಟು. ಆದರೆ ಅದರ ಸರಿಯಾದ ಕ್ರಮವು ತಿಳಿದಿರುವುದಿಲ್ಲ. ಅದಕ್ಕಾಗಿ ಈ ಪಟಲದಲ್ಲಿ ಪೂಜೆಯ ಸರಿಯಾದ ಕ್ರಮವನ್ನು ತಿಳಿಸಿದ್ದಾರೆ. ಸ್ನಾನ ನಿತ್ಯಾಹ್ನೀಕಗಳನ್ನು ಮಾಡಿ ಅನಂತರ ಪೂಜಾಂಗವಾಗಿ ಮೊದಲು ರಾಯರ ಅಷ್ಟೋತ್ತರ ಮಂತ್ರವನ್ನು ಜಪಮಾಡಬೇಕು. ಅನಂತರ ಪ್ರಾಣಾಯಾಮ ಸಂಕಲ್ಪ ಪುರಸ್ಸರವಾಗಿ ಧ್ಯಾನ, ಆವಾಹನ, ಆಸನ, ಸನ್ನಿಧಾಪನ, ಸ್ಥಿರೀಕರಣ, ಅಭಿಮುಖೀಕರಣ, ಪ್ರಸನ್ನೀಕರಣ, ಪಾದ್ಯ, ಅರ್ಘ್ಯ, ಆಚಮನ, ಪಂಚಾಮೃತ ಸ್ನಾನ, ಶುದ್ಧೋದಕ ಸ್ನಾನ, ಮಂಗಲಸ್ನಾನ, ತೀರ್ಥಸ್ನಾನ, ಆಭರಣ, ಗೋಪೀಚಂದನ, ಗಂಧ, ಅಕ್ಷತೆ, ಪುಷ್ಪಪೂಜಾ, ನಾಮಪೂಜಾ, ಧೂಪ, ದೀಪ, ನೈವೇದ್ಯ, ಸ್ತೋತ್ರಪಾಠ, ಹಸ್ತಪ್ರಕ್ಷಾಲನ, ಪುನರಾಚಮನ, ತಾಂಬೂಲ, ಅಷ್ಟನೀರಾಜನ, ಪುಷ್ಪಾಂಜಲಿ, ಪ್ರದಕ್ಷಿಣೆ, ನಮಸ್ಕಾರ ಈ ಉಪಚಾರಗಳಿಂದ ಪೂಜೆ ಮಾಡಿ ಅಪರಾಧ ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕೆಂದು ತಿಳಿಸಿದ್ದಾರೆ.

ಐದನೆಯ ಪಟಲಕ್ಕೆ ರಾಘವೇಂದ್ರಕವಚವೆಂದು ಹೆಸರು. ಇದೂ ಒಂದು ವಿಶಿಷ್ಟವಾದ ತಂತ್ರಪದ್ಧತಿ. ನಾವು ಭಾಗವತ ಷಷ್ಠಸ್ಕಂಧದಲ್ಲಿ ನಾರಾಯಣಕವಚವನ್ನು ನೋಡುತ್ತೇವೆ. ದೇವರನ್ನು ಪ್ರಾರ್ಥಿಸಿ ತನ್ನ ಬೇರೆ ಬೇರೆ ರೂಪಗಳಿಂದ ನಮ್ಮ ಶರೀರದ ಬೇರೆ ಬೇರೆ ಅವಯವಗಳಲ್ಲಿದ್ದು ಅಲ್ಲಿ ಒದಗಬಹುದಾದ ವಿಪತ್ತಿನಿಂದ ರಕ್ಷಣೆಯನ್ನು ಕೊಡಿ ಎಂದು ಪ್ರಾರ್ಥಿಸುವುದು ಈ ಕವಚ ಸ್ತೋತ್ರದ ಸ್ವರೂಪ. ಹಾಗೆಯೇ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ವಸ್ತುಗಳಿಂದ ಒದಗಬಹುದಾದ ರಕ್ಷಣೆಯನ್ನು ಕೇಳುವುದಿದೆ. ಅದರಂತೆ ಇಲ್ಲಿ ರಾಯರ ಧ್ಯಾನವನ್ನು ಮಾಡಿ ಕವಚವು ಹೇಗೆ ಮನುಷ್ಯನನ್ನು ರಕ್ಷಿಸುತ್ತದೆಯೋ ಹಾಗೆ ನಮ್ಮನ್ನು ಸರ್ವ ವಿಪತ್ತಿನಿಂದ ರಕ್ಷಿಸಿ ಎಂದು ಈ ಪಟಲದಲ್ಲಿ ಕೇಳುತ್ತಾರೆ.

ಆರನೆಯ ಪಟಲಕ್ಕೆ ಬಂಧ ವಿಮೋಚನವೆಂದು ಹೆಸರು. ಇದೂ ಹಿಂದಿನಂತೆಯೇ ಒಂದು ಕವಚ. ಬಂಧ ವಿಮೋಚನೆಯ ಅಸಾಧಾರಣ ಫಲಕ್ಕಾಗಿ ಹೇಳಿದ್ದಾರೆ. ಈ ತಂತ್ರವನ್ನು ಅನುಷ್ಠಾನ ಮಾಡಲು ತಾಮ್ರದ ತಟ್ಟೆಯಲ್ಲಿ ಗಂಧದಿಂದ ಗುರಗಳ ಯಂತ್ರವನ್ನು ಬರೆದು

ಮಾಲಾಮಂತ್ರಗಳಿಂದ ಅದನ್ನು ಪೂಜಿಸುವ ವಿಧಾನವನ್ನು ತಿಳಿಸಿದ್ದಾರೆ. ಇದರಿಂದ ಸಂಕೋಲೆ ಮೊದಲಾದ ಸರ್ವ ವಿಧವಾದ ಲೌಕಿಕ ಬಂಧಗಳು ನಿವೃತ್ತವಾಗುತ್ತವೆ ಎಂದು ತಿಳಿಸಿದ್ದಾರೆ.

ಸಪ್ತಮ ಪಟಲಕ್ಕೆ ಅಷ್ಟೋತ್ತರ ಶತನಾಮ ಸ್ತೋತ್ರವೆಂದು ಹೆಸರು. ರಾಯರ ಪೂಜೆ ಮಾಡುವಾಗ ಅಷ್ಟೋತ್ತರ ಶತನಾಮದಿಂದ ಪೂಜೆ ಮಾಡುವ ಕ್ರಮವಿದೆಯಷ್ಟೆ. ಅದಕ್ಕೆ ಅನುಗುಣವಾಗಿ ಅವರ ಗುಣ ಮತ್ತು ಮಹಿಮೆಗಳಿಗೆ ಅನುಗುಣವಾದ ಅಷ್ಟೋತ್ತರ ಶತನಾಮಗಳನ್ನು ಹೇಳಿ ಸೇವೆ ಮಾಡುವವರಿಗೆ ಒಳ್ಳೆಯ ಉಪಕಾರವನ್ನು ಮಾಡಿದ್ದಾರೆ.

ಅಷ್ಟಮ ಪಟಲಕ್ಕೆ ಸಹಸ್ರನಾಮಪಟಲವೆಂದು ಹೆಸರು. ಇದರಲ್ಲಿ ರಾಯರ ಪೂಜೆಗೆ ಉಪಯುಕ್ತವಾದ ರಾಯರ ಸಹಸ್ರನಾಮಗಳನ್ನು ಹೇಳಿದ್ದಾರೆ. ಇದರಲ್ಲಿರುವ ವೈಶಿಷ್ಟ್ಯವೆಂದರೆ ನಿಘಂಟುಗಳಲ್ಲಿ ಜೋಡಿಸಿದಂತೆ ಅಕಾರದಿಂದ ಆರಂಭಿಸಿ ಕ್ಷಕಾರದವರೆಗೆ ಕ್ರಮವಾಗಿ ನಾಮಗಳನ್ನು ಹೇಳಿದ್ದಾರೆ. ಮೊದಲು ಅಕಾರದಿಂದ ಪ್ರಾರಂಭವಾಗುವ ನಾಮಗಳು, ಅನಂತರ ಆಕಾರದಿಂದ, ಆನಂತರ ಇಕಾರದಿಂದ ಕೊನೆಯಲ್ಲಿ ಕ್ಷಕ್ಷಾರದಿಂದ ಈ ರೀತಿ.

ನವಮ ಪಟಲಕ್ಕೆ ಗುರುದಶಸ್ತೋತ್ರಪಟಲವೆಂದು ಹೆಸರು. ಇದರಲ್ಲಿ ಪ್ರಾರಂಭದಲ್ಲಿ ತಿಳಿಸಿದಂತೆ ಅಭಯ ಪ್ರದಾನ ಸ್ತೋತ್ರದಿಂದ ಹಿಡಿದು ಗುರುಕರುಣಾ ಸಂಪಾದಕ ಸ್ತೋತ್ರದವರೆಗೆ ಹತ್ತು ಸ್ತೋತ್ರಗಳು ಇವೆ. ಒಂದೊಂದು ಸ್ತೋತ್ರವೂ ಒಂದೊಂದು ವಿಶೇಷ ಫಲಕ್ಕಾಗಿ ರಚಿತವಾಗಿದೆ. ಗುರುಗಳ ನೈವೇದ್ಯ ಕಾಲದಲ್ಲಿ ಮತ್ತು ನೀರಾಜನದ ಅನಂತರ ಈ ಸ್ತೋತ್ರಗಳನ್ನು ಹೇಳಬೇಕು. ಒಂದೊಂದೇ ವಿಶೇಷ ಫಲವು ಅಪೇಕ್ಷಿತವಾದರೆ ಒಂದೊಂದು ಸ್ತೋತ್ರವನ್ನೇ ಆದಷ್ಟು ಸಲ ಆವೃತ್ತಿ ಮಾಡಿ ಪಠಿಸಬೇಕು.

ದಶಮಪಟಲಕ್ಕೆ ಪ್ರದಕ್ಷಿಣಾಗದ್ಯವೆಂದು ಹೆಸರು. ಹೆಸರೇ ಸೂಚಿಸುವಂತೆ ಗುರುಗಳಿಗೆ ಪ್ರದಕ್ಷಿಣೆ ಮಾಡುವ ಕಾಲದಲ್ಲಿ ಹೇಳಬೇಕಾದ ಗದ್ಯ ಇದು. ಇದು ಸಾಹಿತ್ಯದೃಷ್ಟಿಯಿಂದ ತುಂಬಾ ಸುಂದರವಾದ ಗದ್ಯ. ಹಕ್ಕಿಗಳು ಹಾರುವಾಗ ಅವುಗಳ ರೆಕ್ಕೆಗಳು ಒಮ್ಮೆ ಮೇಲಕ್ಕೂ ಅನಂತರ ಕೆಳಕ್ಕೂ ಬರುವಂತೆ ಈ ಗದ್ಯದ ಲಯವು ಸಮಾನವಾದ ಏರಿಳಿತಗಳಿಂದ ಕೂಡಿದ್ದು ಸಂಗೀತಮಯವಾಗಿದೆ. ಈ ಶೈಲಿಗೆ ಖಗಗತಿ ಎಂದು ಹೆಸರು ಎಂದು ಗ್ರಂಥಕರ್ತೃಗಳೇ ಹೇಳಿದ್ದಾರೆ.

ಏಕಾದಶಪಟಲಕ್ಕೆ ಗಾಥಾಸ್ತುತಿ ಎಂದು ಹೆಸರು. ಇದರಲ್ಲಿ ಐವತ್ತೆರಡು ಶ್ಲೋಕಗಳಿವೆ. ಇದರ ವೈಶಿಷ್ಟ್ಯವೆಂದರೆ ಮೊದಲನೆಯ ಶ್ಲೋಕ ಅಕಾರದಿಂದ ಪ್ರಾರಂಭವಾಗುತ್ತದೆ. ಎರಡನೆಯ ಶ್ಲೋಕ ಆಕಾರದಿಂದ. ಐವತ್ತೊಂದನೆಯ ಶ್ಲೋಕ ಕ್ಷಕ್ಷಾರದಿಂದ. ಹೀಗೆ ಅಕಾರದಿಂದ ಕ್ಷಕಾರದವರೆಗೂ ಇರುವ ಐವತ್ತೊಂದು ವರ್ಣಗಳಿಂದ ಪ್ರಾರಂಭವಾಗುವ ಒಂದೊಂದು ಶ್ಲೋಕವನ್ನು ಮಾಡಿ ಪ್ರತಿಯೊಂದರಲ್ಲೂ ರಾಯರನ್ನು ಕೊಂಡಾಡಿ ಅವರ ಅನುಗ್ರಹವನ್ನು ಆಶಿಸಿ ಕೊನೆಯ (೫೨ನೆಯ) ಶ್ಲೋಕದಲ್ಲಿ ಸ್ತುತಿಯನ್ನು ಸಮಾಪ್ತಿಗೊಳಿಸಿದ್ದಾರೆ.

ಹನ್ನೆರಡನೆಯ ಪಟಲಕ್ಕೆ ಋಣವಿಮೋಚನ ಸ್ತೋತ್ರವೆಂದು ಹೆಸರು. ಎಂಟು ಶ್ಲೋಕಗಳಲ್ಲಿ ರಾಯರನ್ನು ಸ್ತುತಿಸಿ ಋಣಪರಿಹಾರವನ್ನು ಪ್ರಾರ್ಥಿಸಿದ್ದಾರೆ. ಋಣಪರಿಹಾರಕ್ಕೆ ರಾಯರ ಅನುಗ್ರಹವನ್ನು ಸಂಪಾದಿಸಲು ಇಂದೊಂದು ಒಳ್ಳೆಯ ಸ್ತೋತ್ರವಾಗಿದೆ.

ಹದಿಮೂರನೆಯ ಪಟಲಕ್ಕೆ ಪಾದುಕಾ ಪೂಜಾವಿಧಾನವೆಂದು ಹೆಸರು. ರಾಯರ ಪಾದುಕೆಗಳನ್ನಿಟ್ಟುಕೊಂಡು ಅಥವಾ ಪಾದುಕೆಗಳಲ್ಲಿ ರಾಯರನ್ನು ಆವಾಹಿಸಿ ಧ್ಯಾನಾಸನಾದಿ ಉಪಚಾರಗಳಿಂದ ಪೂಜಿಸುವ ಕ್ರಮವನ್ನು ತಿಳಿಸಿದ್ದಾರೆ. ಇದರಲ್ಲಿ "ವಂದೇ ತ್ವಾಂ ದೇವೀಂ" ಎಂದು ಆರಂಭವಾಗುವ ಹತ್ತೊಂಬತ್ತನೆಯ ಶ್ಲೋಕವು ಹಾರಬಂಧದಲ್ಲಿದೆ. ರಾಯರ ಪಾದುಕೆಗಳ ಸುತ್ತಲೂ ಐದು ದಳದ ಹನ್ನೆರಡು ಪುಷ್ಪಗಳನ್ನಿಟ್ಟು ಒಂದೊಂದು ದಳದಲ್ಲಿಯೂ ಹಾರಬಂಧದ ಕ್ರಮದಿಂದ ಒಂದೊಂದು ಅಕ್ಷರವನ್ನು ಬರೆಯಬೇಕು. ಹಾರದ ಪುಷ್ಪದ ಮಧ್ಯೆ ಕರ್ಣಿಕೆಯಲ್ಲಿ ಬರೆದ ಅಕ್ಷರವು ಎರಡಾವರ್ತಿ ಆವೃತ್ತಿಗೊಳ್ಳುತ್ತದೆ. ಹೀಗೆ ಒಂದು ಪುಷ್ಪದಲ್ಲಿ ಏಳು ಅಕ್ಷರಗಳಂತೆ ಹನ್ನೆರಡು ಪುಷ್ಪಗಳಿಂದ ೮೪ ಅಕ್ಷರಗಳ ಈ ಶ್ಲೋಕ ಪೂರ್ಣವಾಗುತ್ತದೆ. ಹಾರಬಂಧದ ನಿಯಮವನ್ನು ತಿಳಿದು ಈ ಶ್ಲೋಕವನ್ನು ಬರೆದು ನೋಡಿದರೆ ಶ್ರೀಕೃಷ್ಣಾವಧೂತರ ಸಾಹಿತ್ಯಕೌಶಲ ಎಂತಹ ಉತ್ತಮ ಮಟ್ಟದ್ದೆಂದು ತಿಳಿದು ಆಶ್ಚರ್ಯವಾಗಿ ಅವರ ಮೇಲೆ ವಿಶೇಷ ಗೌರವವುಂಟಾಗುತ್ತದೆ.

ಹದಿನಾಲ್ಕನೆಯ ಪಟಲಕ್ಕೆ ಕ್ಷಮಾಪಣ ಪಟಲವೆಂದು ಹೆಸರು. ಹೀಗೆ ರಾಘವೇಂದ್ರ ತಂತ್ರವನ್ನು ರಚಿಸುತ್ತಿದ್ದಾಗ ಗುರುಗಳು ಅವರಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಅನುಗ್ರಹ ಮಾಡಿದ ವಿಷಯವನ್ನು ಇಲ್ಲಿ ತಿಳಿಸಿದ್ದಾರೆ. ರಾಯರ ವಿಶೇಷ ಸೇವೆಯನ್ನು ಮಾಡುವ ಅರ್ಹತೆ ಇದ್ದವರಿಗೆ ಮಾತ್ರ ಈ ರಾಘವೇಂದ್ರ ತಂತ್ರದಲ್ಲಿ ಅಭಿರುಚಿಯುಂಟಾಗುತ್ತದೆ. ಉಳಿದವರಿಗೆ ಉಂಟಾಗುವುದಿಲ್ಲವೆಂದು ರಾಯರೇ ತಿಳಿಸಿದುದನ್ನೂ ಸಹ ಇಲ್ಲಿ ಹೇಳಿದ್ದಾರೆ.

ಹದಿನೈದನೆಯ ಪಟಲವು ಉಪಸಂಹಾರ ರೂಪವಾದುದು. ಇದರಲ್ಲಿ ರಾಘವೇಂದ್ರತಂತ್ರವನ್ನು ರಚಿಸಲು ರಾಯರು ಕೊಟ್ಟ ನಿರ್ದುಷ್ಟವಾದ ಸೂಚನೆಯ ಹಿನ್ನಲೆಯನ್ನು ವಿವರಿಸಿ ಆ ಸ್ವಪ್ನದಿಂದ ಎದ್ದಕೂಡಲೇ ತಮ್ಮ ಮುಖದಿಂದ ಹೋರ ಹೊಮ್ಮಿದ ರಾಯರ ಕರುಣಾದಿಗುಣಗಳನ್ನು ಕೊಂಡಾಡುವ ಸ್ತವರಾಜವೆಂದು ಕರೆಯಲ್ಪಡುವ ಸ್ತೋತ್ರವನ್ನು ಹೇಳಿ ರಾಯರಿಗೆ ಸರ್ವಾತ್ಮನಾ ಶರಣಾಗತರಾಗಿ ಗ್ರಂಥವನ್ನು ಸಮಾಪ್ತಿಗೊಳಿಸಿದ್ದಾರೆ. ಈ ಗ್ರಂಥವು ಬಹಳ ವರ್ಷಗಳ ಹಿಂದೆ ಒಮ್ಮೆ ಮುದ್ರಿತವಾಗಿದ್ದು ಅದರ ಯಾವ ಪ್ರತಿಯೂ ದೊರೆಯುತ್ತಿರಲಿಲ್ಲ. ಈಚೆಗೆ ೧೯೮೧ರಲ್ಲಿ ಬೆಂಗಳೂರು ನರಸಿಂಹರಾಜಾ ಕಾಲೋನಿಯ ಹರಿವಿಟ್ಠಲಪ್ರಕಾಶನದವರು ಅದನ್ನು ಮತ್ತೊಮ್ಮೆ ಅಂದವಾಗಿ ಮುದ್ರಿಸಿದ್ದಾರೆ. ಪುಸ್ತಕದಲ್ಲಿದೆ ಎಂದು ಓದಿಕೊಂಡು ಯಾರೂ ಉಪಾಸನೆ ಮಾಡಲು ಹೊರಡಬಾರದು. ಅದೆಲ್ಲವೂ ಪರಂಪರಯಾ ಬ್ರಹ್ಮವಿದ್ಯೆಯೇ ಆಗಿದೆ. ಗುರೂಪದೇಶವಿಲ್ಲದ ವಿದ್ಯೆ ಯಾರಿಗೂ ಫಲಿಸುವುದಿಲ್ಲ. ಆದ್ದರಿಂದ ಗುರುಗಳಿಂದ, ಹಿರಿಯರಿಂದ ಉಪದೇಶ ಪುರಸ್ಸರವಾಗಿ ಈ ತಂತ್ರವನ್ನು ಸ್ವೀಕಾರ ಮಾಡಿ, ರಾಯರ ಸೇವೆಯನ್ನು ಮಾಡುವವರು ಅನುಸರಿಸಲೇ ಬೇಕಾದ ನಿಯಮಗಳನ್ನು ಪಾಲಿಸಿ ಶ್ರದ್ಧಾ ಭಕ್ತಿಗಳಿಂದ ಈ ತಂತ್ರದ ಅನುಷ್ಠಾನ ಮಾಡಿ ರಾಯರ ಸೇವೆಯನ್ನು ಮಾಡಿದರೆ ದೀನರಕ್ಷಕರೂ ಕಲಿಯುಗದ ಕಾಮಧೇನು ಕಲ್ಪವೃಕ್ಷವೂ ಆದ ಶ್ರೀ ರಾಘವೇಂದ್ರ ಗುರುಗಳು ಅನುಗ್ರಹಿಸುವುದರಲ್ಲಿ ಸಂಶಯವಿಲ್ಲ. ಇತಿಶಮ್.

ಹೆಚ್ಚಿನ ವಿವರಗಳಿಗೆ ನೋಡಿ

ಶ್ರೀ ರಾಘವೇಂದ್ರಗುರುಸಾರ್ವಭೌಮರ ಕೃತಿಗಳ ಪರಿಚಯಾತ್ಮಕ ಪ್ರಬಂಧಗಳು

ಕೃಪೆ : ವಿಶ್ವೇಶತೀರ್ಥ ಪ್ರತಿಷ್ಠಾನ, ಮೈಸೂರು

ಪ್ರಕಾಶಕರು